ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 894/2020
ಪಿ ಡಬ್ಲುಃ 06.
ಸಿ ಡಬ್ಲುಃ 25.

| | |
|---|---|
| ಸಾಕ್ಷಿದಾರರ ಹೆಸರು | ಪ್ರದೀಪ ಮಹಾಲೆ |
| ತಂದೆಯ ಹೆಸರು | ವೆಂಕಟೇಶ |
| ವಯಸ್ಸು | 46 |
| ಉದ್ಯೋಗ | ವ್ಯಾಪಾರ |
| ವಾಸ್ತವ್ಯ | ಪ್ರಭಾತ ನಗರ, ಹೊನ್ನಾವರ. |

ಸಾಕ್ಷಿಯನ್ನು ದಿನಾಂಕಃ 24.11.2025 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನನಗೆ ಆರೋಪಿತರ ಪರಿಚಯವಿದೆ. ಆರೋಪಿತರು ಅಕ್ರಮ ಕೂಟವನ್ನು ಕಟ್ಟಿಕೊಂಡು ಗಲಾಟೆ ಮಾಡಿಲ್ಲ ಹಾಗೂ ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಆರೋಪಿತರು ಪೋಲಿಸರ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಹಾಗೂ ಅವಾಚ್ಯವಾಗಿ ಬೈದಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

ದಿನಾಂಕಃ 06.12.2017 ರಂದು ರಾತ್ರಿ 9.00 ರಿಂದ 1.00 ಗಂಟೆಯ ಅವಧಿಯಲ್ಲಿ ಆರೋಪಿತರಾದ ಹಿಂದೂ ಮತ್ತು ಮುಸ್ಲಿಂ ಕೋಮಿನವರು ಅಕ್ರಮ ಕೂಟವನ್ನು ರಚಿಸಿಕೊಂಡು ತಮ್ಮ ತಮ್ಮ ಕೋಮಿನ ಸಲುವಾಗಿ ಘೋಷಣೆಗಳನ್ನು ಕೂಗುತ್ತಾ ಗುಡ್ ಲಕ್ ಹೋಟೆಲ್ ಎದುರಿಗೆ ಕಲ್ಲುಗಳನ್ನು ಮತ್ತು ಸೋಡಾ ಬಾಟಲಿಗಳನ್ನು ಎಸೆಯುತ್ತಾ ಕಟ್ಟಿಗೆ ಬಡಿಗೆಗಳನ್ನು ಹಿಡಿದುಕೊಂಡಿದ್ದರು ಎಂದರೆ ಸರಿಯಲ್ಲ.

ತದನಂತರ ಆರೋಪಿತರ ನಡುವೆ ಉಂಟಾದ ಗಲಾಟೆಯನ್ನು ಪೋಲಿಸರು ಬಿಡಿಸಲು ಮುಂದಾದಾಗ ಆರೋಪಿತರು ಪೋಲಿಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ಅವರ ಮೇಲೆ ಹಲ್ಲೆ ಮಾಡಿ ಅವಾಚ್ಯವಾಗಿ ಬೈದು ಅವರಿಗೆ ಗಾಯಪಡಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಹೇಳಿಕೆಯನ್ನು ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಯಲ್ಲಿನ ಸಂಗತಿಗಳನ್ನು ಅಲ್ಲಗಳೆದಿರುವುದರಿಂದ ಅದನ್ನು ನಿ.ಪಿ. 8 ಎಂದು ಗುರುತಿಸಲಾಯಿತು.

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.